ದಿನಾಂಕಃ 17-06-2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ** ಆರೋಪಿ ಪರ ವಕೀಲರಿಂದ,

1) ನಾನು ಟ್ರಾಕ್ಟರ್ ಡೀಲರ್ ಷಿಪ್ ಮಾಡುತ್ತೇನೆ. ಆರೋಪಿ ನನ್ನ ತಂಗಿ ಕಡೆಯಿಂದ ಪರಿಚಯ ಇರುತ್ತಾರೆ. ಆರೋಪಿ ಸುಮಾರು 08 ವರ್ಷಗಳಿಂದ ಪರಿಚಯ ಇರುತ್ತಾರೆ. ಆರೋಪಿ ಶಿಕ್ಷಕರಾಗಿರುತ್ತಾರೆ. ನಾನು ಆರೋಪಿಗೆ ನಗದು ರೂಪದಲ್ಲಿ ಹಣ ಪಾವತಿ ಮಾಡಿರುತ್ತೇನೆ. ದಿಃ 18-08-2025 ರಂದು ಆರೋಪಿ ನನಗೆ ಹಣ ಬೇಕು ಎಂದು ಕೇಳಿರುತ್ತಾರೆ. ನಂತರ ನಾನು ದಿಃ 25-08-2025 ರಂದು ಆರೋಪಿಗೆ ಹಣ ನೀಡಿರುತ್ತೇನೆ. ದಿಃ 25-08-2025 ರಂದು ನನ್ನ ಬಳಿ ಮೂರು ಲಕ್ಷ ಹಣ ಇತ್ತು. ನಾನು ಲೋಹಿತ್ ಬಳಿ ಎರಡು ಲಕ್ಷ ಹಣ ಸಾಲವಾಗಿ ಪಡೆದುಕೊಂಡಿರುತ್ತೇನೆ. ಸದರಿ ಹಣವನ್ನು ಸೇರಿಸಿ ಆರೋಪಿಗೆ ಹಣ ನೀಡಿರುತ್ತೇನೆ. ಚೆಕ್ ಯಾವ ಕಾರಣಕ್ಕಾಗಿ ಅಮಾನ್ಯಗೊಂಡಿದೆ ಎಂದು ನನಗೆ ನೆನಪಿರುವುದಿಲ್ಲ.

ಮುಂದುವರೆದ ಪಾಟೀ ಸವಾಲು ವಿಚಾರಣೆಗೆ ಕಾಲಾವಕಾಶ ನೀಡಿ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ.ಕೇ.ಸ.ಇ.ಒ.,

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಕೆ.ಆರ್.ನಗರ